ಜೂನ್ 2020

ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

ವಾರ್ತಾಪತ್ರ

## ಋತುಚಕ್ರ ನೈರ್ಮಲ್ಯ (MH) ಕುರಿತ ವಿಶೇಷ ಸಪ್ತಾಹ:

ಗ್ರಾಮೀಣ ಪ್ರದೇಶದಲ್ಲಿ ಹದಿಹರೆಯದ ಹೆಣ್ಣುಮಕ್ಕಳಲ್ಲಿ ಹಾಗೂ ಮಹಿಳೆಯರಲ್ಲಿ ಋತುಚಕ್ರದ ಕುರಿತು ವ್ಯಾಪಕವಾಗಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ "ವಿಶ್ವ ಋತುಚಕ್ರ ನೈರ್ಮಲ್ಯ ದಿನ"ದ ಅಂಗವಾಗಿ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಮೇ 28, 2020 ರಿಂದ ಜೂನ್ 03, 2020ರವರೆಗೆ ಏಳು ದಿನಗಳ ಋತುಚಕ್ರ ನೈರ್ಮಲ್ಯ ನಿರ್ವಹಣೆ ಕುರಿತು ಜಾಗೃತಿ ಮಾಡಿಸಲು ವಿಶೇಷ ಸಪ್ತಾಹವನ್ನು ಆಯೋಜಿಸಲಾಗಿತ್ತು.



ಈ ಸಪ್ತಾಹದ ಅವಧಿಯಲ್ಲಿ ಮಹಿಳೆಯರು ಮತ್ತು ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಋತುಚಕ್ರದ ನೈರ್ಮಲ್ಯ ಕುರಿತು ಜಾಗೃತಿ ಮೂಡಿಸುವುದು ಹಾಗೂ ಇದರಿಂದ ಉಂಟಾಗುವ ಸಮಸ್ಯೆಗಳ ಕುರಿತು ಮುಕ್ತವಾಗಿ ಮಾತನಾಡುವಂತಹ ವಾತಾವರಣವನ್ನು ಕಲ್ಪಿಸಬೇಕು ಎಂಬ ಉದ್ದೇಶದಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಈ ಸಪ್ತಾಹವನ್ನು ಆಯೋಜನೆ ಮಾಡಿತ್ತು. ಸಾಮಾನ್ಯವಾಗಿ ಋತುಚಕ್ರವನ್ನು 28 ದಿನಗಳೆಂದು ಪರಿಗಣಿಸಲಾಗುತ್ತದೆ. ಈ ಬಾರಿಯ ವಿಶ್ವ ಋತುಚಕ್ರ ನೈರ್ಮಲ್ಯ ದಿನವನ್ನು 23 ಬಿಳಿ ಮಣಿ, 5 ಕೆಂಪು ಮಣಿಗಳನ್ನೊಳಗೊಂಡ ಬ್ರಾಸ್‌ಲೇಟ್ ಧರಿಸುವ ಮೂಲಕ ವಿಶೇಷವಾಗಿ ಎಲ್ಲಾ ಜಿಲ್ಲಾ ಪಂಚಾಯಿತಿಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಆಚರಿಸಲಾಯಿತು.

## ಸ್ವಚ್ಛ ಗ್ರಾಮ ಸ್ವಚ್ಛ ಪರಿಸರ-ಸ್ವಚ್ಛತಾ ಪಾಕ್ಷಿಕಾಚರಣೆ:

ಗ್ರಾಮಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆ ಮಾಡುವುದು ಒಂದು ಸವಾಲಾಗಿದೆ. ಮನೆ ಹಂತದಲ್ಲಿ ಅಡುಗೆ ಮಾಡಲು, ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು ಮತ್ತು ಸ್ನಾನ ಮಾಡಲು ಉಪಯೋಗಿಸುವ ತ್ಯಾಜ್ಯದ ನೀರು ಗ್ರಾಮದ ರಸ್ತೆ, ಮನೆಯ ಅಂಗಳ, ಚರಂಡಿ, ಗ್ರಾಮದ ಬೀದಿಗಳಲ್ಲಿ ಹರಿಯಬಿಡುವುದು ಸಾಮಾನ್ಯವಾಗಿದೆ. ಇದಕ್ಕೆ ಹಲವು ಕಾರಣಗಳಿವೆ, ಗ್ರಾಮೀಣ ಜನರಿಗೆ ಒಮ್ಮೆ ಗೃಹ ಬಳಕೆಯಲ್ಲಿ ಉಪಯೋಗಿಸಿದ ನೀರನ್ನು ಸರಿಯಾದ ರೀತಿಯಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ತಾಂತ್ರಿಕ ವಿಧಾನಗಳ ಕುರಿತು ಅರಿವಿನ ಕೊರತೆಯಿದೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಜನರಿಗೆ ದ್ರವ ತ್ಯಾಜ್ಯದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ "ವಿಶ್ವ ಪರಿಸರ ದಿನಾಚರಣೆ"ಯ ಪ್ರಯುಕ್ತ ಗ್ರಾಮೀಣ ಪ್ರದೇಶದಲ್ಲಿ ದ್ರವ ತ್ಯಾಜ್ಯ ನಿರ್ವಹಣೆಯ ಕುರಿತು ವ್ಯಾಪಕವಾದ ಜಾಗೃತಿ ಮೂಡಿಸಲು ಹಾಗೂ ಗ್ರಾಮಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆಯ ವಿಧಾನಗಳನ್ನು ಉತ್ತೇಜಿಸುವ ಸಲುವಾಗಿ ದಿನಾಂಕ: 05-06-2020 ರಿಂದ 19-06-2020ರವರೆಗೆ "ಸ್ವಚ್ಛಗ್ರಾಮ-ಸ್ವಚ್ಛ ಪರಿಸರ" ಎಂಬ ಹೆಸರಿನಡಿ "ಸ್ವಚ್ಛತಾ ಪಾಕ್ಷಿಕಾಚರಣೆ"ಯನ್ನು ಆಯೋಜಿಸಲಾಗಿತ್ತು.



ಈ ಸ್ವಚ್ಛತಾ ಪಾಕ್ಷಿಕಾಚರಣೆಯ ಪ್ರಯುಕ್ತ ಸ್ವಚ್ಛಗ್ರಾಮಗಳನ್ನಾಗಿ ರೂಪಿಸುವಲ್ಲಿ ದ್ರವ ತ್ಯಾಜ್ಯ ಸೂಕ್ತ ನಿರ್ವಹಣೆ ಎಷ್ಟೊಂದು ಪ್ರಾಮುಖ್ಯತೆ ವಹಿಸಿದೆ ಎಂಬುದರ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಮನೆಯ ಹಂತದಲ್ಲಿ ಗೃಹ ಬಳಕೆಗೆ ಉಪಯೋಗಿಸಿದ ನೀರು ಸೂಕ್ತವಾಗಿ ವಿಲೇವಾರಿ ಮಾಡುವುದನ್ನು ಉತ್ತೇಜಿಸಲು ಪೂರಕವಾದ ಮಾಹಿತಿಯನ್ನು ಒಳಗೊಂಡ ಉತ್ತಮ ಕಿರುಚಿತ್ರ ತಯಾರಿಕೆ, ಮಾದರಿ ಹಾಗೂ ಯಶೋಗಾಥೆ (ಉತ್ತಮ ಗುಣಮಟ್ಟದ ಛಾಯಾಚಿತ್ರಗಳೊಂದಿಗೆ ಲೇಖನ ಬರಹ)ಗಳನ್ನು ಆಹ್ವಾನಿಸಿ, ಅವುಗಳನ್ನು ಮೌಲ್ಯಮಾಪನ ಮಾಡಿ ಉತ್ತಮವಾದವುಗಳಿಗೆ ಸೂಕ್ತ ಬಹುಮಾನ ನೀಡುವುದು ಈ ಪಾಕ್ಷಿಕಾಚರಣೆಯ ಮುಖ್ಯ ಉದ್ದೇಶವಾಗಿತ್ತು.

ಮುಂದುವರೆದು, ಕಳೆದ 15 ದಿನಗಳ ಕಾಲ ನಡೆದ ಈ ಪಾಕ್ಷಿಕಾಚರಣೆಯ ಅವಧಿಯಲ್ಲಿ ಜನರಲ್ಲಿ ಶುದ್ಧ, ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಷಯಗಳ ಕುರಿತು ಜಾಗೃತಿ ಮೂಡಿಸಲು ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಹಂತದಲ್ಲಿ ಪತ್ರಿಕಾ ಜಾಹೀರಾತು ಪ್ರಕಟಣೆ, ಆಟೋ ಮೂಲಕ ಪ್ರಚಾರ, ಕರಪತ್ರಗಳ ವಿತರಣೆ, ಪ್ರತಿಜ್ಞಾ ವಿಧಿ, ಶ್ರಮದಾನ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಪ್ರಸ್ತುತ ಎಲ್ಲಾ ಜಿಲ್ಲೆಗಳಲ್ಲಿ ಈ "ಸ್ವಚ್ಛ ಸುಂದರ-ಸ್ವಚ್ಛ ಪರಿಸರ" ಪಾಕ್ಷಿಕಾಚರಣೆಯನ್ನು ಯಶಸ್ವಿಯಾಗಿ ಆಚರಣೆ ಮಾಡಲಾಗಿದ್ದು ಈ ಅವಧಿಯಲ್ಲಿ ದ್ರವ ತ್ಯಾಜ್ಯ ನಿರ್ವಹಣೆ ಕುರಿತು ಹಲವಾರು ಯಶೋಗಾಥೆ, ಲೇಖನ ಮತ್ತು ವಿಡಿಯೋಗಳು ಸ್ವೀಕೃತವಾಗಿದ್ದು ಜಿಲ್ಲಾ ಸಮಿತಿಯು ಇವುಗಳ ಮೌಲ್ಯಮಾಪನ ಕಾರ್ಯ ನಡೆಸುತ್ತಿದ್ದು ಉತ್ತಮ ಲೇಖನ, ಮಾದರಿ ಮತ್ತು ವಿಡಿಯೋಗಳಿಗೆ ಬಹುಮಾನ ನೀಡಿ ಗೌರವಿಸಲಾಗುತ್ತದೆ.

## ತರಬೇತಿ ಕಾರ್ಯಕ್ರಮ:

ಮುಂದಿನ 2024ರ ವೇಳೆಗೆ ಗ್ರಾಮೀಣ ಪ್ರದೇಶದ ಪ್ರತಿಯೊಂದು ಗ್ರಾಮದಲ್ಲಿ ಸುಸ್ಥಿರ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ ಹಾಗೂ ಸುಸ್ಥಿರ ನೈರ್ಮಲ್ಯ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲಶಕ್ತಿ ಮಂತ್ರಾಲಯ ಭಾರತ ಸರ್ಕಾರ, ಸ್ವಚ್ಛ ಭಾರತ್ ಮಿಷನ್ (ಗ್ರಾ)-Phase II ಹೊರಡಿಸಿದೆ. ಈ ಮಾರ್ಗಸೂಚಿಯನ್ವಯ ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳಿಗೆ ಲಭ್ಯವಿರುವ ಅನುದಾನ, ಅನುಷ್ಠಾನ ಮಾಡಬೇಕಾದ ಘಟಕಾಂಶಗಳು, ಜನಜಾಗೃತಿ ಮೂಡಿಸಲು ಹಮ್ಮಿಕೊಳ್ಳಬೇಕಾದ ವಿವಿಧ ಐ.ಇ.ಸಿ/ತರಬೇತಿ ಕಾರ್ಯಕ್ರಮಗಳ ಕುರಿತು ಮೇ 27, 2020 ರಿಂದ ಜೂನ್ 04, 2020ರವರೆಗೆ ಒಟ್ಟು 7 ತಂಡಗಳಲ್ಲಿ (ಬ್ಯಾಚ್) ಆನ್‌ಲೈನ್ ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು.



ಮುಂದುವರೆದು, 9 ದಿನಗಳ ಕಾಲ ನಡೆದ ಈ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 12,680 ಜಿಲ್ಲೆ. ತಾಲ್ಲೂಕು, ಗ್ರಾಮ ಪಂಚಾಯಿತಿ ಮಟ್ಟದ ವಿವಿಧ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು/ ಭಾಗೀದಾರರಿಗೆ ತರಬೇತಿಯನ್ನು ನೀಡಲಾಯಿತು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಡಿ ಸಹಾಯಕ ನಿರ್ದೇಶಕರು, ನಿರ್ದೇಶಕರು ISA, ಯುನಿಸೆಫ್ ರಾಜ್ಯ ಸಂಯೋಜಕರು ಸೇರಿದಂತೆ ಇತರೆ ಸಂಪನ್ಮೂಲ ವ್ಯಕ್ತಿಗಳು ಈ ಕುರಿತು ತರಬೇತಿಯನ್ನು ನೀಡಿದರು.

**ನೀರು – ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ**
**ಪರಿಹಾರ ಸಹಾಯವಾಣಿ 94809 85555 ಗೆ ಕರೆ ಮಾಡಿ.**